ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 21/10/20

# ನಗರೋತ್ಥಾನ ಅನುದಾನಕ್ಕೆ ಕತ್ತರಿ

■ **ಕಲ್ಮೇಶ ಪಟ್ಟಣದವರ** ಹುಬ್ಬಳ್ಳಿ
kalmesh2214@gmail.com

ವಿಕ 21/10

ಸಮ್ಮಿಶ್ರ ಸರಕಾರವಿದ್ದಾಗ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಮಹಾನಗರ ಪಾಲಿಕೆಗಳಿಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗಿತ್ತು. ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ದೋಸ್ತಿ ಸರಕಾರ ಪತನವಾಗಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂತು. ಜತೆಗೆ ನಗರೋತ್ಥಾನ ಅನುದಾನಕ್ಕೂ ಗ್ರಹಣ ಕವಿಯಿತು.

ಬಿಜೆಪಿ ಸರಕಾರ ಕೊರೊನಾ ನೆಪವೊಡ್ಡಿ ನಗರೋತ್ಥಾನ ಯೋಜನೆಗೆ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡದೇ ಮುಂದೂಡುತ್ತಾ ಸಾಗಿದೆ.

ಸಮ್ಮಿಶ್ರ ಸರಕಾರ ಪತನದ ಬಳಿಕ ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರ ಎಲ್ಲ ಪಾಲಿಕೆಗಳಿಗೂ ಅನುದಾನ ಬಿಡುಗಡೆ ಮಾಡುವುದಾಗಿ ನೀಡಿದ್ದ ಭರವಸೆಗೆ 365 ದಿನ ವಯಸ್ಸಾಯಿತೇ ಹೊರತು ಹಣವಂತೂ ಸಿಗಲಿಲ್ಲ.

ರಾಜ್ಯ ಸರಕಾರ 2019ರಲ್ಲಿ ಬೆಂಗಳೂರು ಹೊರತುಪಡಿಸಿ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬಳ್ಳಾರಿ, ಕಲಬುರಗಿ, ವಿಜಯಪುರ, ದಾವಣಗೆರೆ, ಮೈಸೂರು, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರು ಮಹಾನಗರ ಪಾಲಿಕೆಗಳಿಗೆ 1,325 ಕೋಟಿ ರೂ. ವೆಚ್ಚದ ಕಾಮಗಾರಿಗಳನ್ನು 2019-20 ರಿಂದ 2023-24ರವರೆಗೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಿತ್ತು. ಅದಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಸೇರಿದಂತೆ ಉಳಿದ ಪಾಲಿಕೆಗಳು ಕ್ರಿಯಾಯೋಜನೆ ರೂಪಿಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರೂ ಅನುದಾನ ನೀಡಲೇ ಇಲ್ಲ.

## ಎಷ್ಟು ಅನುದಾನ?

| ಮಹಾನಗರ ಪಾಲಿಕೆ | ಅನುದಾನ |
|---|---|
| ಹುಬ್ಬಳ್ಳಿ-ಧಾರವಾಡ | 150 |
| ಮೈಸೂರು | 150 |
| ಕಲಬುರಗಿ | 150 |
| ಬೆಳಗಾವಿ | 125 |
| ದಾವಣಗೆರೆ | 125 |
| ಬಳ್ಳಾರಿ | 125 |
| ವಿಜಯಪುರ | 125 |
| ಮಂಗಳೂರು | 125 |
| ತುಮಕೂರು | 125 |
| ಶಿವಮೊಗ್ಗ | 125 |

(ಕೋಟಿ ರೂ.)



## ಕೊರೊನಾದಿಂದ ಸರಕಾರಕ್ಕೆ ಹೊರೆ

**ಕೊರೊನಾದಿಂದ ಸರಕಾರಕ್ಕೆ ಹೊರೆ ಆಗುತ್ತದೆ ಎಂಬ ಕಾರಣಕ್ಕೆ ನಗರೋತ್ಥಾನ ಯೋಜನೆಯಡಿ ಅನುದಾನವನ್ನು ಬಜೆಟ್‌ನಲ್ಲಿ ಈ ಬಾರಿ ಮೀಸಲಿಟ್ಟಿಲ್ಲ, ಈಗಾಗಲೇ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಸರಕಾರ ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಆಗಬೇಕಿದ್ದ ಸಣ್ಣಪುಟ್ಟ ಅನುದಾನಗಳನ್ನೂ ತಡೆಹಿಡಿಯುತ್ತಿದ್ದು, ಅದರಲ್ಲಿ ಪಾಲಿಕೆಗಳಿಗೆ ಬಿಡುಗಡೆ ಆಗಬೇಕಿದ್ದ ನಗರೋತ್ಥಾನ ಅನುದಾನವೂ ಒಂದಾಗಿದೆ ಎನ್ನಲಾಗುತ್ತಿದೆ.**

**ಮಹಾನಗರ ಪಾಲಿಕೆಗಳಿಗೆ ನಗರೋತ್ಥಾನ ಯೋಜನೆಯ ಅನುದಾನ ಬಿಡುಗಡೆಯಾಗಿಲ್ಲ. ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಈಗಾಗಲೇ ಒಟ್ಟು 80 ಕೋಟಿ ರೂ. ವೆಚ್ಚದಲ್ಲಿ ಪ್ರಮುಖ ರಸ್ತೆ, ಡ್ರೈನೇಜ್ ಕಾಮಗಾರಿ ಕೈಗೊಳ್ಳಲು ಯೋಜಿಸಲಾಗಿದೆ. ಶೀಘ್ರವೇ ಬಿಡುಗಡೆಯಾದರೆ ಬರುವ ಮಾನ್ಸೂನ್ ಒಳಗಾಗಿ ಜಾರಿಗೊಳಿಸಲು ಅನುಕೂಲವಾಗಲಿದೆ.**

**-ಸುರೇಶ ಇಟ್ನಾಳ**
ಆಯುಕ್ತರು ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ

**ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆ:** ಅನುದಾನ ಬಿಡುಗಡೆಯಾಗದ ಕಾರಣ ಪಾಲಿಕೆ ವ್ಯಾಪ್ತಿಯಲ್ಲಿ ಅಭಿವೃದ್ಧಿಗೆ ತೀವ್ರ ಹಿನ್ನಡೆ ಆಗಿದೆ. ಐದು ವರ್ಷಗಳಿಗೆ ಸೀಮಿತವಾಗಿರುವ ಯೋಜನೆಯಲ್ಲಿ ಸರಕಾರ ಪ್ರತಿ ವರ್ಷ ಆಯಾ ಪಾಲಿಕೆ ವ್ಯಾಪ್ತಿಯಲ್ಲಿರುವ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಬೇಕಿತ್ತು. ಅದೇ ಅನುದಾನ ಬಳಕೆ ಮಾಡಿಕೊಂಡು ರಸ್ತೆ, ಕುಡಿಯುವ ನೀರು ಸೇರಿ ಅಭಿವೃದ್ಧಿ ಕಾರ್ಯಗಳನ್ನು ರೂಪಿಸುತ್ತಿದ್ದವು. 2019-20ರ ಅನುದಾನವನ್ನು ಕಳೆದ ಮಾರ್ಚ್‌ನಲ್ಲೇ ಬಿಡುಗಡೆ ಮಾಡಬೇಕಿತ್ತಾದರೂ ಇದೀಗ ಕೊರೊನಾ ನೆಪವೊಡ್ಡಿ ಮಹಾನಗರ ಪಾಲಿಕೆಗೆ ನಯಾ ಪೈಸೆ ಅನುದಾನ ಬಿಡುಗಡೆ ಮಾಡಿಲ್ಲ.